ಶಿವರಾಮ ಕಾರಂತರ ನೆನಪು.

ವರ್ಷಕ್ಕೊಮ್ಮೆ ಹಿರಿಯರನ್ನು ನೆನಪು ಮಾಡಿಕೊಳ್ಳುವುದು
ನಮ್ಮಲ್ಲಿ ಉಳಕೊಂಡಿರುವ ಕೃತಜ್ಞತಾಭಾವದ ಸಂಕೇತ.
ಬಹುಮುಖಿ, ಬಹುರೂಪಿ ಶಿವರಾಮಕಾರಂತರ ಕುರಿತು
ನನ್ನಲ್ಲಿರುವ ನೆನಪನ್ನು ನಿಮ್ಮೊಂದಿಗೆ ಹಂಚಿಕೊಳ್ಳುವುದು ತುಂಬಾ ಖುಶಿಯ ವಿಚಾರ.

"ಚೋಮನ ದುಡಿಯೂ" .... ವಿಟ್ಲದ ರಂಗಾಸಕ್ತರೂ.

1984 ನೇ ಇಸವಿ, ವಿಟ್ಲದಲ್ಲಿ 'ವಿಟ್ಲದ ರಂಗಾಸಕ್ತರು' ಮೋಹನಸೋನ ನಿರ್ದೇಶನದಲ್ಲಿ
ಶಿವರಾಮ ಕಾರಂತರ ಚೋಮನದುಡಿಯನ್ನು
ತುಳುವಿನಲ್ಲಿ ನಾಟಕ ಆಡುವುದೆಂದು ತೀರ್ಮಾನವಾಯ್ತು.

"ಕಾರಂತರಲ್ಲಿ ಮೊದಲು ಕೇಳಿಕೊಳ್ಳಿ ..." ಅಂತ ಕಾದಂಬರಿಯ ತುಳು ಅನುವಾದಕರಾದ
ಕೆದುಂಬಾಡಿ ಜತ್ತಪ್ಪ ರೈಗಳು ಹೇಳಿದ್ದರು. ಹಾಗೆ ಒಪ್ಪಿಗೆಗಾಗಿ
ಶಿವರಾಮ ಕಾರಂತರಿಗೆ ಮೋಹನ ಸೋನ ಅವರೇ ಪತ್ರ ಬರೆದರು.

" ನೀವು ಅದನ್ನು ನಾಟಕ ಮಾಡುವುದು ಬೇಡಾ .... ಬೇರೆಯೇ ಒಂದು ನಾಟಕ ಮಾಡಿ..."
ಅಂತ ಕಾರಂತರ ಉತ್ತರ ಬಂತು.
ಕಾರಂತರು ಒಪ್ಪಿಗೆ ನೀಡಬಹುದೆನ್ನುವ ನಿರೀಕ್ಷೆಯಲ್ಲಿ, ನಾಟಕದ ರಿಹರ್ಸಲ್ ಪ್ರಾರಂಭವಾಗಿತ್ತು.
ಎಲ್ಲರಿಗೂ ದಿಕ್ಕೇ ತೋಚದಂತಾಯ್ತು.

ಆ ಸಂದರ್ಭದಲ್ಲಿ ವಿಟ್ಲದ ಅರಸರಿಗೆ ಸಾರ್ವಜನಿಕ ಸಂಮಾನದ ಯೋಜನೆ ರೂಪುಗೊಂಡು
ಶಿವರಾಮ ಕಾರಂತರನ್ನೇ ಅಧ್ಯಕ್ಷರನ್ನಾಗಿ ಕರೆಯುವುದೆಂದು ತೀರ್ಮಾನವಾಗಿ, ಒಂದು
ನಿಯೋಗ ಕಾರಂತರನ್ನು ಕಾಣಲು ಸಾಲಿಗ್ರಾಮಕ್ಕೆ ಹೊರಟಿತು.

ಅಲ್ಲಿ ಕಾರಂತರು .....
"ಬರ್ತೇನೆ...ನನಗೂ ವಿಟ್ಲ ಅರಮನೆಯ ಒಂದು ಊಟದ ಋಣ ಉಂಟು ಖಂಡಿತಾ ಬರ್ತೇನೆ..."
ಅಂತ ವಿಟ್ಲ, ವಿಟ್ಲದ ಅರಮನೆ ಮುಂತಾಗಿ ತಮ್ಮ ಹಳೆಯ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾ
.... ಖುಶಿಯಲ್ಲಿ ..... ಬೇರೇನು ವಿಷಯ ಎಂದಾಗ .....

ಈ ನಿಯೋಗದಲ್ಲಿದ್ದ, ರಂಗಾಸಕ್ತರು ತಂಡದ ಸಂಯೋಜಕರೂ ಆಗಿದ್ದ ಅನಂತಕೃಷ್ಣ ಹೆಬ್ಬಾರರು,
ಹೆದರಿ ಹೆದರಿ ... ಸಣ್ಣ ಸ್ವರದಲ್ಲಿ ....
"ಒಂದು ಪತ್ರ ಬರೆದಿದ್ದೆವು, ಚೋಮನದುಡಿಯನ್ನು ತುಳುವಿನಲ್ಲಿ ನಾಟಕ ಆಡುವ ಬಗ್ಗೆ ...."
ಅಂತ ಹೇಳಿದರು. ಜೊತೆಯಲ್ಲಿದ್ದ ಉಪನ್ಯಾಸಕ, ವಿಟ್ಲದ **ಮಹಾಬಲ ರೈಯವರು** ತಮ್ಮ
ಕ್ಯಾಮರಾದಲ್ಲಿ ಫೋಟೊ ತೆಗೆಯುತ್ತಾ ಹೋದರು.

ಆಗ ಕಾರಂತರ ಪ್ರತಿಕ್ರಿಯೆ –

"ನೋಡಿ ನಾನು ಅದನ್ನು ನಾಟಕ ಅಂತ ಬರೆದದ್ದಲ್ಲ ...

"ಅಲ್ಲಿ ಬಿ.ವಿ.ಕಾರಂತರು ಅದನ್ನು ನಾಟಕ ಮಾಡಿದ್ದಾರೆ...."

"ಇಲ್ಲಿ ಕೆ.ವಿ.ಸುಬ್ಬಣ್ಣ ಮಾಡಿದ್ದಾರೆ....."

"ಯಾರ್ಯಾರೋ ಎಲ್ಲಾ ಆ ನಾಟಕ ಮಾಡಿದ್ದಾರೆ, ನನಗೆ ಯಾವುದೂ ಸಮಾಧಾನ ಕೊಡ್ಲಿಲ್ಲ"

"ನನ್ನನ್ನು ಯಾಕೆ ಈ ಪ್ರಾಯದಲ್ಲಿ ಹಿಂಸೆ ಮಾಡ್ತೀರಿ ...ನೀವು ಬೇರೆಯೇ ನಾಟಕ ಮಾಡಿ.."

ಮತ್ತೆ ನಾವು ಮಾತಾಡುವುದು ಯಾಕೆ ಅಂತ ಸುಮ್ಮನಾದೆವು....

ಪುನಃ ವಿಟ್ಲದ ಹಳೆಯ ನೆನಪಿನಿಂದ ಪ್ರಸನ್ನರಾದರು.

ಮತ್ತೆ ಎಲ್ಲರೂ ಅವರ ಅಪ್ಪಣೆ ಪಡೆದು ಹೊರಟು ಬಾಗಿಲ ಬಳಿ ಬಂದಾಗ ...
ಪುನಃ ನಾಟಕ ನೆನಪಾಯ್ತೋ ಏನೋ ...

"ಒಟ್ಟಾರೆ ತಲೆ ಬಿಸೀ~ ಆಗ್ತದೆ .... ಆಯ್ತು ಹೇಗೂ ಸುರು ಮಾಡಿದ್ದೀರಲ್ಲ ...
ನೀವೂ ಹುಗಿಯಿರಿ ಅತ್ಲಾಗಿ ಚೋಮನ ಹೆಣವನ್ನು....."



ಹಾಗೆ ಒಪ್ಪಿಗೆ ಸಿಕ್ಕಿ ನಾಟಕ ತಯಾರಿ ಪ್ರಾರಂಭವಾಯ್ತು.
ಸುಮಾರು ಎರಡು ತಿಂಗಳುಗಳ ಕಾಲ ಪ್ರತಿದಿನ ಸಾಯಂಕಾಲ 2–3 ಗಂಟೆಗಳ ರಿಹರ್ಸಲ್,
ಪ್ರತಿದಿನದ ರಿಹರ್ಸಲ್ ನೋಡಲೇ ನೂರಿನ್ನೂರು ಜನ ಪ್ರೇಕ್ಷಕರು. ಒಂದು ಹಬ್ಬವೇ ಆಗಿತ್ತು.

ರಿಹರ್ಸಲ್ ಪ್ರಾರಂಭವಾಗಿ ಒಂದೆರಡು ದಿನಗಳಲ್ಲಿ ಚೋಮನದುಡಿ ಕಾದಂಬರಿಯ ತುಳು
ಅನುವಾದಕರಾದ ಕೆದುಂಬಾಡಿ ಜತ್ತಪ್ಪ ರೈಗಳು ಬಂದವರು ಹೇಳಿದರು. ....
"ನೋಡೀ ಕಾರಂತರು ನನಗೆ ಪತ್ರ ಬರೆದಿದ್ದಾರೆ....
'ವಿಟ್ಲದಲ್ಲಿ ಹುಡುಗರು ನಾಟಕ ಮಾಡ್ತಾರೆ. ನೀವೊಮ್ಮೆ ಹೋಗಿ ನೋಡಿ, ...
ಯಾರಾದರೂ ಕೇಳಿದರೆ ನಾನು ನೋಡ್ಲಿಲ್ಲ ಅಂತ ಹೇಳಿ.....' ..... ಅಂತ ಬರ್ದಿದ್ದಾರೆ.....

ಅಂದ್ರೆ ನಿಮಗೆ ಅರ್ಥ ಆಯ್ತಲ್ಲ ....! ನಾಟಕ ಖಂಡಿತಾ ಒಳ್ಳೆದಾಗ್ಲಿಕಿಲ್ಲ ...
ಆದ್ರೆ ಹುಡುಗರಿಗೆ ಬೇಸರ ಆಗುವುದು ಬೇಡಾ... ಅಂತ ಅವರ ಮಾತಿನ ಅರ್ಥ....." .....
ಅಂತ ಕಾರಂತರ 'ದ್ವನಿ'ಯನ್ನು ವಿವರಿಸಿಯೇ ಬಿಟ್ರು.

ನಾವು ಅವರಲ್ಲಿ "ನಟರ ತುಳು ಶಬ್ಧಗಳ ಉಚ್ಚಾರ ಇತ್ಯಾದಿ ಸರಿಯಾಗುತ್ತದೋ ಇಲ್ಲವೋ ...
ನೀವು ತಿದ್ದಬೇಕು...." ಅಂತ ಕೇಳಿಕೊಂಡೆವು.
ಒಂದು ಪೇಪರ್, ಪೆನ್ನೂ ನಮ್ಮಲ್ಲೇ ಕೇಳಿ ತೆಗೆದುಕೊಂಡು, ತಪ್ಪುಗಳನ್ನು ಗುರುತು
ಹಾಕಿಕೊಳ್ಳುತ್ತಾ ಹೋದರು. ಮೊದಲಿನ ಐದು ನಿಮಿಷದ ದೃಶ್ಯದಲ್ಲಿ ಎರಡು ಪುಟಕ್ಕೂ
ಹೆಚ್ಚು ತಪ್ಪುಗಳನ್ನು ನೋಟ್ ಮಾಡಿಕೊಂಡರು. ... ಆ ಮೇಲೆ ಪೇಪರ್ ಕಾಲಿ ಉಳಿದಿತ್ತು.

ರಿಹರ್ಸಲ್ ಮುಗಿದ ನಂತರ ಜತ್ತಪ್ಪ ರೈಯವರು ನಮ್ಮಲ್ಲಿ.... " ನಿಕುಳು ಉಂದೆಟ್ ಮಿತ್ತ್
ಬೂರಿಯಾರ್... ಕಾರಂತೆರೆಗ್ ಯಾನ್ ಪಣ್ಪೆ...." (ನೀವು ಗೆದ್ರಿ ...ಕಾರಂತರಿಗೆ ನಾನು
ಹೇಳ್ತೇನೆ...") ಅಂತ ಭಾರೀ ಖುಶಿಯಲ್ಲಿ ಹೇಳಿದರು. ...

ನಂತರ ಒಂದು ದಿನ ಎಲ್ಲಾ ಸಿದ್ದತೆಯೊಂದಿಗೆ ನಾಟಕ ನಡೆಯಿತು.
ಸಾಂಪ್ರದಾಯಿಕ ವೇದಿಕೆಯನ್ನು ಬಿಟ್ಟು, ಸುಮಾರು ಅರ್ದ ಎಕರೆ ಜಾಗ ರಂಗವೇದಿಕೆ,
50 ಕ್ಕೂ ಮಿಕ್ಕಿ ನಟರು, ಅನೇಕ ತಂತ್ರಜ್ಞರು, 60ಕ್ಕೂ ಮಿಕ್ಕಿ ಸ್ಪಾಟ್ ಲೈಟ್ಸ್,
ಚೋಮನ ಗುಡಿಸಲು, ದನಿಗಳ ಮನೆ...ಇತ್ಯಾದಿ ಸೆಟ್ಟಿಂಗಿನೊಂದಿಗೆ,
ಗಟ್ಟಕ್ಕೆ ಹೋಗುವ ದೃಶ್ಯ, ಹೊಳೆಯ ಬದಿ, ಮಕ್ಕಳು ಹೊಳೆಗೆ ಹಾರಿ ಈಜಾಡುವ ದೃಶ್ಯ,
ಚರ್ಚು, ಇತ್ಯಾದಿ... ಬೆರಗು ಗೊಳಿಸಿದ ದೃಷ್ಯಗಳಿಂದ,
ಸಂದರ್ಭಕ್ಕೆ ತಕ್ಕುದಾದ ದ್ವನಿ, ಸಂಗೀತದಿಂದ,
ಆ ಕಾಲದಲ್ಲಿ ವಿಟ್ಲಕ್ಕೆ ಹೊಸತೆನಿಸಿದ ಬೇಕಾದಲ್ಲಿಗೆ ಮಾತ್ರ ಬೀಳುವ ಬೆಳಕಿನ ವಿನ್ಯಾಸದಿಂದ ...
ನಾಟಕ ಜನಮನ ಸೂರೆಗೊಂಡಿತು. ಒಟ್ಟೂ ಕನಸಿನಲ್ಲಿ ಕಂಡ ಹಾಗೆ ...
ಒಂದು ಸಿನೀಮಾ ನೋಡಿದ ಹಾಗೆ .. ಪ್ರೇಕ್ಷಕರು ಸಂಭ್ರಮದಲ್ಲಿ ತೇಲಾಡಿದ್ದರು.

ನಾಟಕಕ್ಕೆ 2 ರುಪಾಯಿ ಪ್ರವೇಶದರ ಇಟ್ಟಿದ್ದರೂ ...
“ದುಡ್ಡಿಲ್ಲವೆನ್ನುವ ಕಾರಣಕ್ಕೆ ನಾಟಕ ಕಳೆದುಕೊಳ್ಳಬೇಡಿ ಉಚಿತ ಪ್ರವೇಶವೂ ಇದೆ...” ಎಂದು ಕರಪತ್ರದಲ್ಲಿ ತಿಳಿಸಲಾಗಿತ್ತು. ಸುಮಾರು 3–4 ಸಾವಿರ ಪ್ರೇಕ್ಷಕರು ಬಂದು, ನಾಟಕ ನೋಡಿ ಅವರಾಗಿ ಬಂದು, ಧನ ಸಹಾಯ ಮಾಡಿ, ಸಂತೋಷಪಟ್ಟಿದ್ದರು.
ನಾಟಕ ತಯಾರಿ,ಪ್ರದರ್ಶನಕ್ಕೆ ಸಂಬಂಧಪಟ್ಟ ಖರ್ಚೆಲ್ಲಾ ಕಳೆದು
ನಾಲ್ಕೈದು ಸಾವಿರ ರೂಪಾಯಿ ಉಳಿತಾಯವಾದದ್ದು ಒಂದು ದಾಖಲೆಯೇ ಸರಿ.

ಇಂದಿಗೂ ಅಂದಿನ ಚೋಮನದುಡಿಯನ್ನು ನೆನಪು ಮಾಡಿಕೊಳ್ಳುವವರೆಷ್ಟೋ ಜನ.
ಜತ್ತಪ್ಪ ರೈಯವರು ನಾಟಕಕ್ಕೂ ಬಂದು ಸಂತೋಷಪಟ್ಟು, ನಮ್ಮನ್ನೆಲ್ಲಾ ಹರಸಿ, ನಂತರ ಶಿವರಾಮ ಕಾರಂತರಿಗೆ ಪತ್ರಬರೆದು ಎಲ್ಲಾ ಯಶಸ್ಸಿನ ಬಗ್ಗೆ ತಿಳಿಸಿದ್ದರು,
ಕಾರಂತರಿಗೂ ತುಂಬಾ ಸಮಾಧಾನವಾಗಿತ್ತು ಅಂತ ಗೊತ್ತಾಗಿ ನಮಗೂ ಧನ್ಯತೆ ಮೂಡಿತ್ತು.

(– ಮೂರ್ತಿ ದೇರಾಜೆ)